ಬದಲಾವಣೆ ಬಯಸುವವರು ಸಾಹಿತಿಗಳೋ, ಭಾಷಣವೀರರೋ ಆದರೆ ಪ್ರಯೋಜನವಿಲ್ಲ. ಶೋಷಿತರೊಡನೆ ಸೇರಿ ಅವರಿಗೆ ವಿದ್ಯೆ ತಿಳಿವಳಿಕೆ ಕೊಟ್ಟು, ಅವರನ್ನು ಹೋರಾಟಕ್ಕೆ ಸಂಘಟಿಸಬೇಕು. ಇದು ಮಾತಾಡುವಷ್ಟು ಸುಲಭದ, ಒಂದೊಪ್ಪತ್ತಿನಲ್ಲಿ ಸಾಧ್ಯವಾಗಿ ಬಿಡುವ ಕೆಲಸವಲ್ಲ'. ಚಂದ್ರ ಹೇಳಿದ, 'ನಿಮ್ಮ ಮಾತು ನಿಜ, ಸಾರ್, ನಾನು ಕರ್ನಾಟಕದಲ್ಲಿ ದಲಿತರನ್ನು ನೋಡಿದ್ದೇನೆ. ಆದರೆ ನನ್ನ ಹುಟ್ಟೂರಿನಲ್ಲಿರುವ ದಲಿತರು ಇನ್ನೂ ಹೀನಸ್ಥಿತಿಯಲ್ಲಿದ್ದಾರೆ. ಅವರ ಬಗ್ಗೆ ಹೇಳಿದರೆ ನೀವು ನಂಬುತ್ತೀರೋ ಇಲ್ಲವೋ. ಹಂದಿನಾಯಿಗಳಿಗಿಂತ ಕಡೆಯಾಗಿದ್ದಾರೆ.

ಊರಾಚೆಗೆ ಅವರ ಕೇರಿ ಇದೆ. ಕೇರಿ ಎಂದರೆ ಒಂದಷ್ಟು ಕೆಮ್ಮಣ್ಣು ಗೋಡೆಯ ತಲೆ ನೆಲಕ್ಕೆ ಮುಟ್ಟಿಸಿ ನಮಸ್ಕರಿಸುವಂತೆ ತೋರುವ ದೀನದರಿದ್ರ ಗುಡಿಸಲುಗಳು. ಗಂಡಸರಿಗೆ ಒಂದು ಕೌಪೀನ, ಚಡ್ಡಿ ಅಥವಾ ತುಂಡು ಪಂಚೆ. ಹೆಂಗಸರಿಗೆ ತುಂಡುಸೀರೆ, ಸೊಂಟದ ಮೇಲೆ ಯಾರೂ ಏನೂ ತೊಡುವಂತಿಲ್ಲ. ತಲೆಗೆ ಏನಾದರೊಂದು ಕೊಳೆಬಟ್ಟೆ ಸುತ್ತಿರುತ್ತಾರೆ. ಮಕ್ಕಳು ಬರಿಬತ್ತಲೆ.

ಈ ಹೊಲೆಯರು ಬೆಳಗಿನ ವೇಳೆ ಊರೊಳಕ್ಕೆ ಬರುವಂತಿಲ್ಲ. ಊರೊಳಗಿನ ಅಂಗಡಿಗಳಲ್ಲಿ ಏನಾದರೂ ದಿನಸಿ ವಸ್ತುಗಳನ್ನು ಕೊಳ್ಳಬೇಕಿದ್ದರೆ, ಸಂಜೆ ಕತ್ತಲು ಕವಿದ ನಂತರ ಬರಬೇಕು. ಬರುವಾಗ 'ಹೋ' ಎಂದು ಕೂಗಿಕೊಂಡು ಬರಬೇಕು. ಆಗ ಊರೊಳಗಿನ ಮಂದಿ ತಮ್ಮ ಮನೆಗಳೊಳಗೆ ಹೋಗುತ್ತಾರೆ. ಇವರು ಮುಖ ಮರೆಸಿಕೊಂಡು, ಅಂಗಡಿಗಳಲ್ಲಿ ಬೇಕಾದ್ದು ಕೊಳ್ಳಬೇಕು.

ಹಗಲುಹೊತ್ತು ಗಂಡಸರು ಹೆಂಗಸರು ಊರಾಚೆಯ ಇತರರ ಹೊಲಗದ್ದೆ ತೋಟಗಳಲ್ಲಿ ಗೇಯುತ್ತಾರೆ. ಆಗ ಕೇರಿಯ ಗುಡಿಸಲುಗಳಲ್ಲಿ ಮುದುಕ ಮುದುಕಿಯರು ಹಸುಗೂಸುಗಳನ್ನು, ಕೋಳಿ ಹಂದಿಗಳನ್ನು ನೋಡಿಕೊಳ್ಳುತ್ತಾರೆ. ಸಂಜೆಗೆ ಕೂಲಿಕಾಸಲ್ಲಿ ಎಲ್ಲರಿಗೂ ಊಟ, ಹೆಂಡ. ಕಾಯಿಲೆ ಕಸಾಲೆಯಾದರೆ ಅವರಿಗೆ ಯಾವ ಔಷಧೋಪಚಾರವೂ ಇಲ್ಲ. ಅವರಲ್ಲೊಬ್ಬ ಮಂತ್ರವಾದಿ ಇದ್ದಾನೆ. ಅವನು ಮಾಡಿದ್ದೇ ಮಾಟ, ಕೊಟ್ಟದ್ದೇ ಮದ್ದು. ರೋಗಿ ಉಳಿದರೆ ಅವನ ಪುಣ್ಯ. ಎಲ್ಲ ಭಾರವನ್ನು ತಮ್ಮ ದೇವರಾದ 'ಏಡುಕೊಂಡಲವಾಡು' ಮತ್ತು 'ಮಾರಮ್ಮ ತಲ್ಲಿ'ಯ ಮೇಲೆ ಹಾಕಿ, ಕೈಚೆಲ್ಲಿ ಕೂಡುತ್ತಾರೆ.

ಈ ಅಸ್ಪೃಶ್ಯರಲ್ಲಿ ಕೆಲವು ಸುಂದರ ಹೆಣ್ಣುಗಳಿರುತ್ತವಲ್ಲ! ಅವರನ್ನು ಕದ್ದು ಭೋಗಿಸುವುದಕ್ಕೆ ಮಾತ್ರ ಊರಿನ ಜಾತಿವಂತ, ಸ್ಥಿತಿವಂತ ಗಂಡುಗಳಿಗೆ ಯಾವ ಮೈಲಿಗೆಯೂ ಇಲ್ಲ. ಅದು ಒಂದು ರೀತಿ ಅವರ ಜನ್ಮಸಿದ್ಧ ಹಕ್ಕು. ಅವರಿಗೆ ಮೈ ಒಪ್ಪಿಸಬೇಕಾದ್ದು ಆ ಹೊಲೆಹೆಣ್ಣುಗಳ ಜನ್ಮಸಿದ್ಧ ಕರ್ಮ, ಕರ್ತವ್ಯ. ಈ ಭೀಕರ ಶೋಷಣೆಗೆ ಆ ಹೊಲೆಯರು ಎಷ್ಟು ಹೊಂದಿಕೊಂಡು ಬಿಟ್ಟಿದ್ದಾರೆಂದರೆ, ಇದಕ್ಕಿಂತ ಬೇರೆ ಸ್ಥಿತಿ ಬಹುಶಃ ಅವರ ಕನಸು ಕಲ್ಪನೆಗಳಲ್ಲೂ ಇಲ್ಲಾಂತ ಕಾಣುತ್ತೆ. ಇದ್ದದ್ದರಲ್ಲೇ ತಕ್ಕಮಟ್ಟಿಗೆ ಖುಷಿಯಾಗಿರಲು, ಸಮಾಧಾನದಿಂದಿರಲು ಅವರು ಕಲಿತಿದ್ದಾರೆ. ಈ ಸ್ಥಿತಿಯಿಂದ ಅವರನ್ನು ಮೇಲೆತ್ತಲು ಪ್ರಯತ್ನಿಸಿದರೆ ಬದಲಾಯಿಸಲು ಪ್ರಯತ್ನಿಸಿದರೆ, ಅಂಥವರ ವಿರುದ್ಧ ಪ್ರತಿಭಟಿಸುವವರಲ್ಲಿ ಮೊದಲಿಗರು ಬಹುಶಃ ಆ ಹೊಲೆಯರೇ.

ನಾನು ಹಳ್ಳಿಗೆ ಹೋದಾಗೆಲ್ಲ ಅವರನ್ನು ಅವರ ದುಃಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಆದರೆ ನಾನು ಹೊಲಗೇರಿ ಕಡೆ ಹೋದದ್ದೋ, ಅವರೊಂದಿಗೆ ಮಾತಾಡಿದ್ದೋ ತಿಳಿದರೆ ಅಪ್ಪ